# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 703
ಸದಸ್ಯರ ಹೆಸರು : ಡಾ|| ಉಮಾಶ್ರೀ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 12-03-2025

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಶಕ್ತಿ ಯೋಜನೆಯಡಿ 2023-24 ಹಾಗೂ 2024-25ನೇ ಸಾಲಿನಲ್ಲಿ ಪ್ರಯಾಣಿಸಿದ ಮಹಿಳೆಯರು ಎಷ್ಟು;</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಶಕ್ತಿ ಯೋಜನೆಯಡಿ 2023-24 ಹಾಗೂ 2024-25ನೇ ಸಾಲಿನಲ್ಲಿ ಪ್ರಯಾಣಿಸಿದ ಮಹಿಳೆಯರ ಸಂಖ್ಯೆ ಕೆಳಕಂಡಂತಿದೆ:-<br>(ಕೋಟಿಗಳಲ್ಲಿ)<br><table><tr><th>ಸಂಸ್ಥೆ/ನಿಗಮ</th><th>2023-24</th><th>2024-25 (ಫೆಬ್ರುವರಿ-2025ರ ಅಂತ್ಯಕ್ಕೆ)</th></tr><tr><td>ಕ.ರಾ.ರ.ಸಾ.ನಿಗಮ</td><td>56.27</td><td>69.27</td></tr><tr><td>ಬೆಂ.ಮ.ಸಾ.ಸಂಸ್ಥೆ</td><td>57.84</td><td>70.49</td></tr><tr><td>ವಾ.ಕ.ರ.ಸಾ.ಸಂಸ್ಥೆ</td><td>42.14</td><td>47.00</td></tr><tr><td>ಕ.ಕ.ರ.ಸಾ.ನಿಗಮ</td><td>26.81</td><td>31.87</td></tr><tr><td>ಒಟ್ಟು</td><td>183.06</td><td>218.63</td></tr></table></td></tr>
<tr><td>ಆ.</td><td>2023-24 ಹಾಗೂ 2024-25ರಲ್ಲಿ ಈ ಯೋಜನೆಗಾಗಿ ಕಾದಿರಿಸಿದ್ದ ಹಣವೆಷ್ಟು; ವರ್ಷದ ಕೊನೆಗೆ ವ್ಯಯವಾದ ಹಣ ಎಷ್ಟು;</td><td>2023-24ನೇ ಸಾಲಿನ ಆಯವ್ಯಯದಲ್ಲಿ ಶಕ್ತಿ ಯೋಜನೆಗಾಗಿ ರೂ.280000.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿತ್ತು ಹಾಗೂ ನಂತರದಲ್ಲಿ ರೂ.40000.00 ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿದ್ದು, ಹೀಗೆ ಒಟ್ಟಾರೆ ರೂ. 320000.00 ಲಕ್ಷಗಳನ್ನು ಒದಗಿಸಲಾಗಿದೆ. ಸದರಿ ಅನುದಾನವನ್ನು ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಬಿಡುಗಡೆಗೊಳಿಸಲಾಗಿದ್ದು, ಅದರಂತೆ,ನಿಗಮಗಳು ಸಂಪೂರ್ಣವಾಗಿ ಉಪಯೋಗಿಸಿಕೊಂಡಿರುತ್ತವೆ.<br><br>2024-25ನೇ ಸಾಲಿನ ಆಯವ್ಯಯದಲ್ಲಿ ರೂ.501500.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಸದರಿ ಅನುದಾನದಲ್ಲಿ ಫೆಬ್ರುವರಿ-2025ರ ಮಾಹೆಯವರೆಗೆ ಒಟ್ಟು ರೂ. 459708.26 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದ್ದು, ಸದರಿ ಅನುದಾನವನ್ನು ಸಂಸ್ಥೆಗಳು ಸಂಪೂರ್ಣವಾಗಿ ಉಪಯೋಗಿಸಿಕೊಂಡಿರುತ್ತವೆ ಹಾಗೂ ಉಳಿದ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ.</td></tr>
<tr><td>ಇ.</td><td>2023-24 ಹಾಗೂ 2024-25ರಲ್ಲಿ ಈ ಯೋಜನೆಗಾಗಿ ಎಷ್ಟು ಬಸ್ಸುಗಳನ್ನು ಉಪಯೋಗಿಸಲಾಗಿದೆ; ಯಾವ ಪ್ರದೇಶಗಳಿಗೆ ಮಹಿಳೆಯರು ಎಷ್ಟು ಪ್ರವಾಸ ಮಾಡಿದ್ದಾರೆ; ಧಾರ್ಮಿಕ ಸ್ಥಳಗಳಾಗಿದ್ದಲ್ಲಿ, ಅತೀ ಹೆಚ್ಚು ಪ್ರವಾಸ ಮಾಡಿದ ಧಾರ್ಮಿಕ ಸ್ಥಳಗಳು ಯಾವುವು</td><td><u>ಕ.ರಾ.ರ.ಸಾ.ನಿಗಮ:-</u><br>2023-24ರಲ್ಲಿ 7811 ಅನುಸೂಚಿಗಳ ಪೈಕಿ 6542 ಅನುಸೂಚಿಗಳು/ ಬಸ್ಸುಗಳು ಶಕ್ತಿ ಯೋಜನೆಯ ವ್ಯಾಪ್ತಿಯಲ್ಲಿರುತ್ತವೆ.<br><br>2024-25ರಲ್ಲಿ 8069 ಅನುಸೂಚಿಗಳ ಪೈಕಿ 6923 ಅನುಸೂಚಿಗಳು/ ಬಸ್ಸುಗಳು ಶಕ್ತಿ ಯೋಜನೆಯ ವ್ಯಾಪ್ತಿಯಲ್ಲಿರುತ್ತವೆ.<br><br>ಬೆಂ.ಮ.ಸಾ.ಸಂಸ್ಥೆ:<br><br>ಸಂಸ್ಥೆಯು 2023-24 ನೇ ಸಾಲಿನಲ್ಲಿ (ಮಾರ್ಚ್-2024 ರಂತೆ) 5121 ಬಸ್ಸುಗಳಿಂದ 54251 ಸುತ್ತುವಳಿಗಳನ್ನು ಹಾಗೂ 2024-25 ನೇ ಸಾಲಿನಲ್ಲಿ (ದಿನಾಂಕ:03.03.2025 ರಂತೆ) 5394 ಬಸ್ಸುಗಳಿಂದ 57974 ಸುತ್ತುವಳಿಗಳನ್ನು ಆಚರಣೆಗೊಳಿಸಲಾಗುತ್ತಿದೆ.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಮತ್ತು ಅತೀ ಹೆಚ್ಚು ಪ್ರವಾಸ ಮಾಡಿದ ಐತಿಹಾಸಿಕ ಸ್ಥಳಗಳು ಯಾವುವು? | **ವಾ.ಕ.ರ.ಸಾ.ಸಂಸ್ಥೆ**<br>2023-24 ನೇ ಸಾಲಿನಲ್ಲಿ ಸಂಸ್ಥೆಯಿಂದ ಒಟ್ಟು 4588 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗಿದ್ದು. ಇದರಲ್ಲಿ 4098 ಅನುಸೂಚಿಗಳಲ್ಲಿ ಶಕ್ತಿ ಯೋಜನೆಯಡಿ ಮಹಿಳೆಯರ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ.<br>2024-25 ನೇ ಸಾಲಿನ ಜನವರಿ-25ರ ಮಾಹೆಯ ಅಂತ್ಯಕ್ಕೆ ಒಟ್ಟು 4763 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು. ಇದರಲ್ಲಿ 4301 ಅನುಸೂಚಿಗಳಲ್ಲಿ ಶಕ್ತಿ ಯೋಜನೆಯಡಿ ಮಹಿಳೆಯರ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ.<br>ಮಹಿಳೆಯರು ರಾಜ್ಯದಲ್ಲಿರುವ ಎಲ್ಲ ಧಾರ್ಮಿಕ ಮತ್ತು ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಸೇರಿದಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿನ ಧಾರ್ಮಿಕ ಹಾಗೂ ಐತಿಹಾಸಿಕ ಸ್ಥಳಗಳಾದ ಸವದತ್ತಿ ಯಲ್ಲಮ್ಮಗುಡ್ಡ, ಬದಾಮಿ ಬನಶಂಕರಿ, ಮೈಲಾರ, ದೇವರಗುಡ್ಡ, ಚಿಂಚಲಿ, ಉಳವಿ ಚನ್ನಬಸವೇಶ್ವರ, ಗೊಡಚಿ ಧಾರ್ಮಿಕ ಸ್ಥಳಗಳಿಗೆ ಹಾಗೂ ಬದಾಮಿ, ಪಟ್ಟದಕಲ್ಲು, ಐಹೊಳೆ, ಲಕ್ಕುಂಡಿ, ಗೋಕಾಕ ಫಾಲ್ಸ, ಐತಿಹಾಸಿಕ ಸ್ಥಳಗಳಿಗೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣ ಮಾಡಿರುವುದು ಕಂಡುಬಂದಿರುತ್ತದೆ.<br><br>**ಕ.ಕ.ರ.ಸಾ.ನಿಗಮ**<br>2023-24ರಲ್ಲಿ 4588 ಅನುಸೂಚಿಗಳ ಪೈಕಿ 3852 ಅನುಸೂಚಿಗಳು/ ಬಸ್ಸುಗಳನ್ನು ಶಕ್ತಿ ಯೋಜನೆಯ ವ್ಯಾಪ್ತಿಯಲ್ಲಿರುತ್ತವೆ.<br>2024-25ರಲ್ಲಿ 4636 ಅನುಸೂಚಿಗಳ ಪೈಕಿ 3943 ಅನುಸೂಚಿಗಳು/ ಬಸ್ಸುಗಳನ್ನು ಶಕ್ತಿ ಯೋಜನೆಯ ವ್ಯಾಪ್ತಿಯಲ್ಲಿರುತ್ತವೆ.<br>ಶಕ್ತಿ ಯೋಜನೆ ಜಾರಿಯಾದಾಗಿನಿಂದ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು. ಪ್ರತಿ ದಿನ ಸರಾಸರಿ 17.50 ಲಕ್ಷ ಪ್ರಯಾಣಿಕರು ವಿವಿಧ ಸ್ಥಳಗಳಿಗೆ ಪ್ರಯಾಣಿಸುತ್ತಿದ್ದಾರೆ. ಪ್ರಯಾಣಿಕರು ಯಾವ ಸ್ಥಳಗಳಿಗೆ ಪ್ರಯಾಣಿಸುತ್ತಾರೆ ಎಂಬ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ.<br>ಆದಾಗ್ಯೂ ಪ್ರಮುಖವಾದ ಧಾರ್ಮಿಕ ಸ್ಥಳಗಳಾದ ಶರಣಬಸವೇಶ್ವರ ದೇವಸ್ಥಾನ, ಗಾಣಗಾಪುರ, ಘತ್ತರಗಿ, ಸನ್ನತ್ತಿ, ಹುಲಗಿ, ಅಂಜನಾದ್ರಿ ಬೆಟ್ಟ, ಮೈಲಾರ, ಇತರೆ ಐತಿಹಾಸಿಕ ಸ್ಥಳಗಳಿಗೆ ಹಾಗೂ ಹಂಪಿ, ವಿಜಯಪುರ, ಬೀದರ, ಬೆಂಗಳೂರು, ಮೈಸೂರು ಇತರೆ ಐತಿಹಾಸಿಕ ಸ್ಥಳಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸಿರುವುದು ಕಂಡು ಬಂದಿರುತ್ತದೆ.<br>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಶಕ್ತಿ ಯೋಜನೆಯಡಿ ಮಹಿಳೆಯರು ಯಾವ ಪ್ರದೇಶಗಳಿಗೆ ಎಷ್ಟು ಪ್ರವಾಸ ಮಾಡಿದ್ದಾರೆ ಎಂಬುದರ ಪ್ರತ್ಯೇಕ ಮಾಹಿತಿ ಲಭ್ಯವಿರುವುದಿಲ್ಲ. ಅದಾಗ್ಯೂ, ಶಕ್ತಿ ಯೋಜನೆಯಡಿಯಲ್ಲಿ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಜೂನ್-2023 ರಿಂದ ಫೆಬ್ರುವರಿ-2025ರವರೆಗೆ ಪ್ರಯಾಣಿಸಿದ ಘಟಕವಾರು ಒಟ್ಟು ಫಲಾನುಭವಿಗಳ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

ಸಂಖ್ಯೆ: ಟಿಡಿ 45 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು